Reg.No. : 22470/1961 Dt.: 7-7-1961 RBI Lic. No. UBD-KAN-1463-P Dt.:5-9-1997

# ದಿ ಆಝಾದ ಕೋ - ಆಪರೇಟಿವ್ ಬ್ಯಾಂಕ ಲಿಮಿಟೆಡ್, ಗದಗ.

ಪ್ರಧಾನ ಕಛೇರಿ : ಸರ್. ಎಂ. ವಿಶ್ವೇಶ್ವರಯ್ಯ ರಸ್ತೆ, ಗಂಗಾಪೂರಪೇಟ, ಗದಗ-582101

☎ : ಕಛೇರಿ 08372-238518, ಮ್ಯಾನೇಜರ : 234124, ಶಾಖೆ : 231286

## ವಾರ್ಷಿಕ ಸಾಧಾರಣ ಸಭೆಯ ನೋಟಿಸು

**ಮಾನ್ಯ ಸದಸ್ಯರೇ,**

ಬ್ಯಾಂಕಿನ ಸನ್ 2025–26ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಸರಫ್‌ರಾಜ ಅಹ್ಮದ ಎಸ್. ಉಮಚಗಿ** ಇವರ ಅಧ್ಯಕ್ಷತೆಯಲ್ಲಿ **ದಿನಾಂಕ 23–8–2026ನೇ ರವಿವಾರ ಮುಂಜಾನೆ 11–00 ಘಂಟೆಗೆ** ಬ್ಯಾಂಕಿನ ಆಡಳಿತ ಕಚೇರಿ ಸರ್ ಎಂ. ವಿಶ್ವೇಶ್ವರಯ್ಯ ರಸ್ತೆ, ಗಂಗಾಪೂರಪೇಟ, ಗದಗದಲ್ಲಿ ಕರೆಯಲಾಗಿದೆ. ಕಾರಣ ಸರ್ವ ಸದಸ್ಯರು ಸಮಯಕ್ಕೆ ಸರಿಯಾಗಿ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

## ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು :

1. 65ನೇ ಸರ್ವ ಸದಸ್ಯರ ಮುಂದೆ ಮಹಾಸಭೆಯ ನೋಟೀಸು ಓದಿ ದಾಖಲ ಮಾಡುವುದು.
2. 03–08–2025 ರಂದು ಜರುಗಿದ ಸಭೆಯ ಗೊತ್ತುವಳಿಗಳನ್ನು ಓದಿ ದೃಢೀಕರಿಸುವುದು.
3. ಮಂಡಳಿಯು ಮಂಡಿಸಿದ ಹಿಂದಿನ ವರ್ಷದ ವಾರ್ಷಿಕ ವರದಿಯ ಪರಿಗಣನೆ.
4. ಸನ್ 2026–27ನೇ ಸಾಲಿಗೆ ರಿಝರ್ವ ಬ್ಯಾಂಕಿನ ಸುತ್ತೋಲೆ ಪ್ರಕಾರ ಶಾಸನ ಬದ್ಧ ಲೆಕ್ಕ ಪರಿಶೋಧಕರ ನೇಮಕ ಮಾಡಿದ್ದನ್ನು ಪರಿಶೀಲಿಸುವುದು. ಆಂತರಿಕ ಲೆಕ್ಕ ಪರಿಶೋಧಕರ ನೇಮಕ
5. ಸನ್ 2025–26ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಪರಿಶೋಧಿತ ಲೆಕ್ಕಗಳ ಪರಿಗಣನೆ.
6. ಸನ್ 2025–26ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಪಾಲನಾ ವರದಿಯ ಪರಿಗಣನೆ.
7. ನಿವ್ವಳ ಲಾಭ ವಿಲೆ ಮಾಡುವುದು.
8. ವಾರ್ಷಿಕ ಕಾರ್ಯಾಚರಣೆಯ ಯೋಜನೆ ಅನುಮೋದನೆ.
9. 2025–26ನೇ ಸಾಲಿನ ಪರಿಷ್ಕೃತ ಹಾಗೂ 2026–27ನೇ ಸಾಲಿನ ವಾರ್ಷಿಕ ಬಜೆಟ್ ಅನುಮೋದನೆ.
10. ಸನ್ 2025–26ನೇ ಸಾಲಿನ ಸಿಬ್ಬಂದಿಗೆ ಎಕ್ಸಗ್ರೇಷಿಯಾ (ಬೋನಸ್) ಕೊಡತಕ್ಕದ್ದು ಅಂತಾ ಅಢಾವೆಯಲ್ಲಿ ತೋರಿಸಿದ್ದು ಅದರ ಅನುಮೋದನೆ.
11. ಹಿಂದಿನ ವರ್ಷ ಸದಸ್ಯರನ್ನು ಸೇರಿಸಿಕೊಂಡ ಹಾಗೂ ತೆಗೆದು ಹಾಕಿದ ಸಂಕ್ಷಿಪ್ತ ವರದಿ.
12. ಹಿಂದಿನ ವರ್ಷ ಬಜೆಟ್‌ಗಿಂತ ಹೆಚ್ಚುವರಿ ಖರ್ಚಿಗೆ ಅನುಮೋದನೆ ಪಡೆಯುವುದು.
13. ಸಿಬ್ಬಂದಿಗಳ ವೃಂದ ಬಲ ಮತ್ತು ವೇತನ ಶ್ರೇಣಿ ಅನುಮೋದನೆ.
14. ಪ್ರಸ್ತುತ ವರ್ಷದಲ್ಲಿ ವಿತರಿಸಬೇಕಾದ ಷೇರುಗಳ ಸಂಖ್ಯೆ ನಿರ್ಧರಿಸುವುದು.
15. ಸಿಬ್ಬಂದಿ ಸೇವಾ ನಿಯಮಗಳು ಹಾಗೂ ಇತರೆ ವ್ಯವಹಾರ ನಿಯಮಗಳಿಗೆ ಅನುಮೋದನೆ.
16. ಉಪವಿಧಿಗಳ ರೂಪಿಸುವಿಕೆ ಮತ್ತು ತಿದ್ದು ಪಡೆಗಳ ಅನುಮೋದನೆ.
17. ಬ್ಯಾಂಕಿನ ಕಟ್ಟಡ ನಿರ್ಮಾಣ ಒಳಗೊಂಡಂತೆ ಸ್ಥಿರಾಸ್ಥಿಯ ಅನುಮೋದನೆ.
18. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

| | | |
|---|---|---|
| | ಸಹಿ | ಸಹಿ |
| **ಗದಗ** | **ಶ್ರೀ ಎ.ಜಿ. ಯರಗುಡಿ** | **ಹಾಜಿ ಸರಫ್‌ರಾಜ ಅಹ್ಮದ ಎಸ್.ಉಮಚಗಿ** |
| **24–07–2026** | ವ್ಯವಸ್ಥಾಪಕ ನಿರ್ದೇಶಕರು | ಚೇರಮನ್‌ರು |

## ಸೂಚನೆಗಳು :

1. ವಾರ್ಷಿಕ ಸಾಧಾರಣ ಸಭೆಯಲ್ಲಿ ಯಾವುದೇ ವಿಷಯಗಳ ಬಗ್ಗೆ ಚರ್ಚೆ ಅಥವಾ ಸಲಹೆ–ಸೂಚನೆ ಕೊಡುವುದಿದ್ದಲ್ಲಿ 5 ದಿನ ಮುಂಚಿತವಾಗಿ ಲಿಖಿತ ರೂಪದಲ್ಲಿ ಮ್ಯಾನೇಜರ ಇವರಿಗೆ ಕೊಡಬಹುದು.
2. ಬ್ಯಾಂಕಿನ ಸುಸ್ತಿದಾರರು ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ರ ಕಲಂ 27ಎ, ಅನ್ವಯ ಅನರ್ಹರಾದ ಸದಸ್ಯರಿಗೆ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಮತ ಚಲಾಯಿಸುವ ಹಾಗೂ ವಿಷಯಗಳನ್ನು ಪ್ರಸ್ತಾಪ ಮಾಡಲು ಅವಕಾಶ ಇರುವದಿಲ್ಲ.
3. ಸದಸ್ಯರು ಸಭೆಗೆ ಹಾಜರಾಗುವಾಗ ಸದರಿ ನೋಟೀಸು ಅಥವಾ ಬ್ಯಾಂಕಿನ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.
4. ಯಾವುದೇ ಶೇರುದಾರರಿಗೆ ಶೇರು ಡಿವ್ಹಿಡೆಂಡ ಕೊಡಲು ಬ್ಯಾಂಕಿನಿಂದ ಪ್ರಕಟಿಸಲ್ಪಟ್ಟ ದಿನಾಂಕದಿಂದ 3 ವರ್ಷದ ಅವಧಿಯವರೆಗೆ ಡಿವ್ಹಿಡೆಂಡ ತೆಗೆದುಕೊಳ್ಳದಿದ್ದಲ್ಲಿ ಅಂಥಾ ಡಿವ್ಹಿಡೆಂಡ ಬ್ಯಾಂಕಿನ ರಿಜರ್ವ ಫಂಡಿಗೆ ವರ್ಗಾಯಿಸಲಾಗುವುದು. ಅದರ ಬಗ್ಗೆ ಪ್ರತ್ಯೇಕ ನೋಟಿಸ ನೀಡಲಾಗುವುದಿಲ್ಲ.
5. ಸನ್ 2025–26ನೇ ಸಾಲಿನ ಜಮಾ ಖರ್ಚು ಪತ್ರಿಕೆ ಬ್ಯಾಂಕಿನ ನೋಟೀಸ್ ಬೋರ್ಡಿಗೆ ಅಂಟಿಸಲಾಗಿದೆ ಹಾಗೂ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. (www.azadbankgdg.com)